## ಷೆಡ್ಯೂಲ್–III

## ಬೋಧನಾ ಸಿಬ್ಬಂದಿ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲು ಅನುಸರಿಸಬೇಕಾದ ಆಯ್ಕೆ ವಿಧಾನ

1. ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಹುದ್ದೆಗೆ ನಿಗದಿಪಡಿಸಿದ ಅರ್ಹತಾ ಷರತ್ತುಗಳನ್ನು ಪೂರೈಸುವ ಅಭ್ಯರ್ಥಿಗಳಲ್ಲಿ ಮೆರಿಟ್ ಆಧಾರದ ಮೇಲೆ ಅರ್ಹ ಅಭ್ಯರ್ಥಿಯನ್ನು ಆಯ್ಕೆ ಮಾಡುವುದು ಆಯ್ಕೆ ಮಂಡಳಿಯ ಜವಾಬ್ದಾರಿ ಆಗಿರುತ್ತದೆ.
2. ಆಯ್ಕೆ ಮಂಡಳಿಯು ನಡೆಸುವ ಸಂದರ್ಶನದಲ್ಲಿ ಈ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವ ಗುಣವಿಶೇಷಣ ಅಂಶಗಳ ಬಗ್ಗೆ ಅಭ್ಯರ್ಥಿ ಗಳ ಬುದ್ಧಿಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಲು ಅಂಕ ನಿಗದಿ ಪದ್ಧತಿಯನ್ನು ಅಳವಡಿಸಿಕೊಳ್ಳುವುದು.

| ರಾಜ್ಯ ಒಕ್ಕಲಿಗರ ಸಂಘ,<br>ಸಂದರ್ಶನ ಅಂಕ ನಿಗದಿ ಪಟ್ಟಿ | | | |
|---|---|---|---|
| (ಅ) ಸಂಸ್ಥೆಯ ಹೆಸರು | | | |
| (ಆ) ನೇರ ನೇಮಕಾತಿ ನಡೆಸಲಾಗುತ್ತಿರುವ ಹುದ್ದೆ | | | |
| (ಇ) ಸಂದರ್ಶನಕ್ಕೆ ಹಾಜರಾದ ಅಭ್ಯರ್ಥಿಯ ಹೆಸರು | | | |
| (ಈ) ವಿದ್ಯಾರ್ಹತೆ ಮತ್ತು ಅರ್ಹತಾ ಪರೀಕ್ಷೆಯಲ್ಲಿ ಪಡೆದಿರುವ ಶೇಕಡಾವಾರು ಅಂಕಗಳು | | | |
| (ಉ) ವಯಸ್ಸು ಮತ್ತು ಜನ್ಮ ದಿನಾಂಕ | | | |
| ವಿವರಗಳು/ಇನ್‌ಪುಟ್ | ಗರಿಷ್ಠ ಅಂಕಗಳು | ಅಭ್ಯರ್ಥಿಯು ಪಡೆದ ಅಂಕಗಳು | ಷರಾ |
| (1) ಅರ್ಹತಾ ಪರೀಕ್ಷೆಯಲ್ಲಿ ಪಡೆದ ಶೇಕಡವಾರು ಅಂಕಗಳು( ಶ್ರೇಣೀಕರಣ ಅನ್ವಯಿಸುವ ಕಡೆ)(*) | 60 (**) | | |
| (2) ಬುದ್ಧಿಸಾಮರ್ಥ್ಯ, ಸಾಮಾನ್ಯಜ್ಞಾನ, ಅಭಿವ್ಯಕ್ತಿ, ಸಂವಹನ, ವರ್ತನೆ, ಜಾಣ್ಮೆ ಇತ್ಯಾದಿ ಮೌಲ್ಯಮಾಪನ | 20 | | |
| (3) ಸ್ನಾತಕೋತ್ತರ ವ್ಯಾಸಂಗದ ಹಂತದಲ್ಲಿ ಪ್ರಕಟಣೆಗಳು/ಪ್ರಬಂಧ(ಲೇಖನ)ಗಳನ್ನು ಮಂಡಿಸಿರುವುದು. | 10 | | |
| (4) ಗ್ರಾಮೀಣ ಅಭ್ಯರ್ಥಿಗಳಿಗೆ ನೀಡುವ ಕೃಪಾಂಕ(ಸಕ್ಷಮ ಪ್ರಾಧಿಕಾರದಿಂದ ಪಡೆದ ಸರ್ಟಿಫಿಕೇಟ್ ಹಾಜರುಪಡಿಸಿದಲ್ಲಿ) | 10 | | |
| ಒಟ್ಟು | 100 | | |

3. ಸಂದರ್ಶನ ಮುಗಿದ ನಂತರ ಆಯ್ಕೆ ಮಂಡಳಿಯ ನಡವಳಿಗಳನ್ನು ಅಂತಿಮ ಆಯ್ಕೆ ಪಟ್ಟಿಯಲ್ಲಿ ಸೇರಿಸಲಾದ ಅಭ್ಯರ್ಥಿಗಳ ವಿವರಗಳೊಂದಿಗೆ ನೇಮಕಾತಿ ಪ್ರಾಧಿಕಾರಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸುವುದು.

(*) ಅರ್ಹತಾ ಪರೀಕ್ಷೆಗಳಲ್ಲಿ ಶ್ರೇಣಿಗಳನ್ನು ನೀಡಿರುವ ಸಂದರ್ಭಗಳಲ್ಲಿ, ಶೇಕಡಾವಾರು ಅಂಕಗಳಿಗೆ ಸಮಾನವಾದ ಶ್ರೇಣಿಯನ್ನು ಆಯಾ ಶೈಕ್ಷಣಿಕ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿರುವ ಕ್ರಮದಲ್ಲಿ ನಿರ್ಧರಿಸುವುದು.

(**) ಅರ್ಹತಾ ಪರೀಕ್ಷೆಯಲ್ಲಿನ ಶೇಕಡಾವಾರು ಅಂಕಗಳನ್ನು 60 ರಿಂದ ಗುಣಿಸಿ ಹಾಗೂ 100 ರಿಂದ ಭಾಗಿಸಿ ಬರುವ ಅಂಕಗಳನ್ನು ಅಭ್ಯರ್ಥಿಯು ಈ ವರ್ಗದಲ್ಲಿ ಪಡೆದ ಅಂಕಗಳೆಂದು ಪರಿಗಣಿಸತಕ್ಕದ್ದು.

(ಬಿ.ಸಿದ್ದಯ್ಯ)
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ರಾಜ್ಯ ಒಕ್ಕಲಿಗರ ಸಂಘ.